ಶ್ರೀ ಎಸ್.ಆರ್. ಬೊಮ್ಮಾಯಿ (ಮಾನ್ಯ ಕಂದಾಯ ಸಚಿವರು)--

ಅ) ಸಮಿತಿಯು ವಂದ್ಯಾಂತರ ವರದಿಯನ್ನು ಒಪ್ಪಿಸಿದೆ, ಆದರೆ ಅಂತಿಮ ವರದಿಯನ್ನು ಇನ್ನೂ ಸಲ್ಲಿಸಿಲ್ಲ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಕೆ.ಹೆಚ್. ಪಾಟೀಲ್.--ಮಾನ್ಯ ಅಧ್ಯಕ್ಷರೇ, ಈ ಹಗ್ಗೆ ಕೆಲವು ಪತ್ರಿಕೆಗಳಲ್ಲಿ ಪ್ರಕಟವಾಗಿರುವುದು ನಿಜವೇ ಎಂದು ಪ್ರಶ್ನೆ ಕೇಳಿದ್ದೇನೆ. ಇದಕ್ಕೆ ಮಾನ್ಯ ಸಚಿವರು ಇಲ್ಲ ಎಂದು ಹೇಳಿದ್ದಾರೆ. ಇದು ತಾವು ಪತ್ರಿಕೆಗಳನ್ನು ನೋಡುವುದಿಲ್ಲ ಎಂದು ಅಭಿಪ್ರಾಯವೋ ಅಥವಾ ಪತ್ರಿಕೆಗಳಲ್ಲಿ ಪ್ರಕಟವಾಗಿಲ್ಲ ಎಂಬುದು ತಮ್ಮ ಅಭಿಪ್ರಾಯವೋ. ಈಗ ಸಮಿತಿಯು ಸಲ್ಲಿಸಿರುವ ಇಂಟೀರಿಯಂ ರಿಪೋರ್ಟ್‌ನ್ನು ಪ್ರಕಟಿಸಲಿಕ್ಕೆ ಅಭ್ಯಂತರ ಏನೂ ಇಲ್ಲ. ಆ ವರದಿಯನ್ನು ಪ್ರಕಟ ಮಾಡುತ್ತೀರಾ ? ಇಂಟೀರಿಯಂ ವರದಿಯ ಮೇಲೆ ತಾವು ಏನೂ ಆಕ್ಷನ್ ತೆಗೆದುಕೊಳ್ಳುವುದಿಲ್ಲವೇ ? ಪತ್ರಿಕೆಗಳಲ್ಲಿ ಮೊದಲಂ ವಾಸುದೇವರಾವ್ ಸಮಿತಿಯ ಶಿಫಾರಸ್ಸುಗಳ ವರದಿ ಎಂದು ಏನು ಪ್ರಕಟಿಸಿದ್ದರು. ಈಗ ಅದಕ್ಕೆ ತದ್ವಿರುದ್ಧವಾದ ವರದಿ ಪ್ರಕಟವಾಗಿದೆ. ಮೊದಲನೇ ವರದಿಯ ಒಳಗೆ ಗದಗ್‌ನ್ನು ಜಿಲ್ಲೆಯನ್ನಾಗಿ ಮಾಡುವಂತೆ ಇದ್ದುದು, ಹುಂಡೇಕಾರ್ ಸಮಿತಿ ವರದಿಯಲ್ಲಿ ಬಾಗಲಕೋಟೆಯನ್ನು ಜಿಲ್ಲೆಯನ್ನಾಗಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ಎಂದು ಬಂದಿವೆ. ಇದು ಮೂರರಂ ನಾಲ್ಕು ಮಹತ್ವದ ಪತ್ರಿಕೆಗಳಲ್ಲಿ ಬಂದಿದೆ. ಈ ವರದಿ ತಪ್ಪಿದ್ದರೆ ನನಗೆ ಬಹಳ ಸಂತೋಷ. ಇದು ಸರಿಯೇ ಇಲ್ಲವೇ ಎಂಬುದನ್ನು ತಮ್ಮಿಂದ ಕೇಳಬಯಸುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.--ಪತ್ರಿಕಾ ವರದಿ ಸರಿಯಲ್ಲ. ವಂಧ್ಯಂತರ ವರದಿಯನ್ನು ಇನ್ನೂ ಮಂತ್ರಿ ಮಂಡಲ ಪರಿತೀಲನೆ ಮಾಡಿಲ್ಲ. ಆದನ್ನು ಪ್ರಕಟಿಸುವುದಕ್ಕೂ ಸಾಧ್ಯ ಇಲ್ಲ. ವಂಧ್ಯಂತರ ವರದಿಯ ಮೇಲೆ ಯಾವುದೇ ಕಾರ್ಯಕ್ರಮ ತೆಗೆದುಕೊಳ್ಳುವುದಿಲ್ಲ. ಕೊನೇ ವರದಿ ಬಂದ ಮೇಲೆ ನಾವು ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕಾರ್ಖಾನೆ

೧೯೩. ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).-- ಮಾನ್ಯ ಸಹಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ೧೯೭೫ರ ನಂತರ ಶ್ರೀ ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಒಟ್ಟಾರೆ ನಿಲಂಬಿತ ಹಾಗೂ ಕೆಲಸದಿಂದ ವಜಾ ಮಾಡಿರುವ ಸಿಬ್ಬಂದಿಯವರ ಹೆಸರುಗಳೇನು ?

ಆ) ನಿಲಂಬಿತ ಹಾಗೂ ವಜಾ ಮಾಡಿರುವ ಸಿಬ್ಬಂದಿ ಅವರ ಮೇಲೆ ಇರತಕ್ಕಂತಹ ಆರೋಪಗಳೇನು ?

ಇ) ಅನ್ಯಾಯಕ್ಕೊಳಪಟ್ಟಿರುವ ಕಾರ್ಮಿಕ ವರ್ಗಕ್ಕೆ ಸರ್ಕಾರದಿಂದ ಮಾಡಿರುವ ಸಹಾಯವೇನು ?

ಈ) ಸಕ್ಕರೆ ನಿರ್ದೇಶಕರಿಂದ ವಜಾ ಮಾಡಿರುವ ಸಿಬ್ಬಂದಿ ವರ್ಗದ ವಿಷಯದಲ್ಲಿ ತಡೆ ಆಜ್ಞೆ ಇದ್ದಾಗ್ಯೂ ಕಾಯ್ದೆಯ ಉಲ್ಲಂಘನೆ ಮಾಡಿ ನೌಕರರನ್ನು ಹೊರಹಾಕಿರುವ ಕಾರ್ಯನಿರ್ದೇಶಕರ ಕರ್ತವ್ಯದಲ್ಲಿ ಚ್ಯುತಿ ಆದದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಉ) ಸಕ್ಕರೆ ನಿರ್ದೇಶಕರ ತಡೆ ಆಜ್ಞೆ ಇದ್ದಾಗ್ಯೂ ವಜಾ ಮಾಡಿರುವ ಕಾರ್ಯನಿರ್ದೇಶಕರ ಮೇಲೆ ಸರ್ಕಾರದಿಂದ ತೆಗೆದುಕೊಳ್ಳಬಹುದಾದ ಕಾರ್ಯಕ್ರಮಗಳೇನು ?

ಊ) ಕ್ಷುಲ್ಲಕ ಕಾರಣಗಳಿಂದ ವಜಾ ಮಾಡಿರುವ ಸಿಬ್ಬಂದಿ ವರ್ಗವನ್ನು ಕೆಲಸದ ಮೇಲೆ ಹಾಜರಿ ಮಾಡಿಸಿ ಕೊಳ್ಳಲು ಸರ್ಕಾರದವರು ತೆಗೆದುಕೊಳ್ಳಬಹುದಾದ ಕಾರ್ಯಕ್ರಮಗಳೇನು ?

ಖ) ಶ್ರೀ ಹಿರಣ್ಯಕೇಶಿ ಡಿಪ್ಟೋರಿ ವಿಭಾಗದಲ್ಲಿ ಕೆಲಸದ ಮೇಲೆ ಇದ್ದಾಗ ಮಟಕಾ ಆಟದಲ್ಲಿ ತೊಡಗಿರುವ ಸಿಬಂದಿ ವರ್ಗವನ್ನು ನಿಲಂಬಿತಗೊಳಿಸಿ ಮರು ಕೆಲಸದ ಮೇಲೆ ತೆಗೆದುಕೊಂಡಿರುವುದು ಮಟಕಾ ವೃತ್ತಿಗೆ ಮತ್ತಷ್ಟು ಚಾಲನೆ ಕೊಟ್ಟು ಪ್ರೋತ್ಸಾಹಿಸಿದ ಕಾರ್ಖಾನೆಯಂ ಆಡಳಿತದ ವೈಖರಿಯ ಬಗ್ಗೆ ಸರ್ಕಾರದವರು ತೆಗೆದುಕೊಳ್ಳಬಹುದಾದ ಕ್ರಮವೇನು ?

ಶ್ರೀ ಆರ್.ಎಲ್. ಜಾಲಪ್ಪ (ಮಾನ್ಯ ಸಹಕಾರಿ ಸಚಿವರು).--

ಅ) ಕಾರ್ಖಾನೆಯಿಂದ ಒದಗಿಸಿರುವ ವರದಿಯ ಪ್ರಕಾರ ಶ್ರೀ ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕಾರ್ಖಾನೆಯಿಂದ ಒಟ್ಟಾರೆ ನಿಲಂಬಿತ ಹಾಗೂ ಕೆಲಸದಿಂದ ವಜಾ ಮಾಡಿರುವ ಸಿಬ್ಬಂದಿ ಸಂಖ್ಯೆ-೨೩. ಹೆಸರು ಮತ್ತು ಇತರ ವಿವರಗಳನ್ನು ಅನುಬಂಧ-(ಅ)ರಲ್ಲಿ ಕೂಲಂಕುಷವಾಗಿ ವಿವರಿಸಲಾಗಿದೆ.

ಆ) ಆರೋಪಗಳ ವಿವರಗಳನ್ನು ಕೂಲಂಕುಷವಾಗಿ ಅನುಬಂಧ ಆ) ರಲ್ಲಿ ಒದಗಿಸಲಾಗಿದೆ.

ಇ) ಸಹಕಾರ ಸಂಘಗಳ ಕೆಲಸಗಾರರು ಕಾರ್ಮಿಕ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡುವುದರ ಜೊತೆಗೆ ಸಹಕಾರಿ ಸಂಘಗಳ ಖಾಯಿದೆ ಕಲಂ ೭೦ರ ಪ್ರಕಾರ ಸಹಕಾರ ಸಂಘಗಳ ನಿಬಂಧಕರಲ್ಲೂ ಸಹ ಮೊಕದ್ದಮೆ ಹೂಡಬಹುದು. ಈ ಪ್ರಕಾರವಾಗಿ ಅನ್ಯಾಯದ ಬಗ್ಗೆ ಸಕ್ಕರೆ ನಿರ್ದೇಶಕರು ದಾವಾ ಸಲ್ಲಿಸಿದ ೩ಜನ ಕಾರ್ಮಿಕರಿಗೆ ತಡೆಯಾಜ್ಞೆ ನೀಡಿದ್ದಾರೆ.

ಈ) ಕಾರ್ಖಾನೆಯಿಂದ ಒದಗಿಸಿರುವ ವರದಿಯ ಪ್ರಕಾರ ಸಕ್ಕರೆ ನಿರ್ದೇಶನಾಲಯದಿಂದ ತಡೆ ಆಜ್ಞೆ ಕಾರ್ಖಾನೆಗೆ ಸೇರುವ ಮುನ್ನವೇ ಕಾರ್ಯನಿರ್ವಾಹಕ ಸಮಿತಿಯ ನಿರ್ಣಯದ ಪ್ರಕಾರ ಸಂಬಂಧಪಟ್ಟ ಸಿಬ್ಬಂದಿಯನ್ನು ಕೆಲಸದಿಂದ ವಜಾ ಮಾಡಲಾಗಿತ್ತು. ಇದರಿಂದ ಕಾರ್ಯ ನಿರ್ದೇಶಕರ ಕರ್ತವ್ಯಕ್ಕೆ ಚ್ಯುತಿ ಬಂದಂತಾಗುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಊ) ಇದರ ಬಗ್ಗೆ ಕೂಲಂಕುಷವಾದ ತನಿಖಾ ವರದಿಯನ್ನು ಪಡೆದ ನಂತರ ಮುಂದಿನ ಕ್ರಮದ ಬಗ್ಗೆ ನಿರ್ಧರಿಸಬಹುದಾಗಿದೆ.

ಋ) ಅವರ ಮೇಲೆ ಶಿಸ್ತಿನ ಕ್ರಮವನ್ನು ಕೈಕೊಂಡು ಅವರು ತಮ್ಮ ತಪ್ಪನ್ನು ಒಪ್ಪಿ ಇನ್ನು ಮುಂದೆ ಇಂತಹ ದುರ್ವರ್ತನೆ ಮಾಡುವುದಿಲ್ಲವೆಂದು ಆಶ್ವಾಸನೆ ಕೊಟ್ಟಮೇಲೆ ಸೂಕ್ತವಾದ ಎಚ್ಚರಿಕೆಯನ್ನು ಕೊಟ್ಟು ಅವರನ್ನು ಕೆಲಸದ ಮೇಲೆ ಹಾಜರಪಡಿಸಿಕೊಳ್ಳಲಾಗಿದೆ ಇನ್ನು ಮುಂದೆ ಇಂಥದೇ ದುರ್ವರ್ತನೆಯನ್ನು ಪುನಃ ಮಾಡಿದ್ದು ಕಂಡು ಬಂದಲ್ಲಿ ಅವರನ್ನು ಕೆಲಸದಿಂದ ವಜಾ ಮಾಡಲಾಗುವುದೆಂದೂ ತಿಳಿಸಿ ಸದರಿ ದುರ್ವರ್ತನೆಯ ಬಗ್ಗೆ ೪ ದಿನಗಳ ಮಟ್ಟಿಗೆ ನಿಲಂಬಿತಗೊಳಿಸುವ ಶಿಕ್ಷೆ ವಿಧಿಸಿ ತೀವ್ರತರ ಎಚ್ಚರಿಕೆ ಕೊಡಲಾಗಿದೆ. ಕಾರಣ ಮಟಕಾ ಅಭಿವೃದ್ಧಿಗೆ ಮತ್ತಷ್ಟು ಚಾಲನೆ ಕೊಟ್ಟು ಪ್ರೋತ್ಸಾಹಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಅನುಬಂಧ—(ಅ)

೧೯೭೫ರ ನಂತರ ಒಟ್ಟಾರೆ ನಿಲಂಬಿತ ಹಾಗೂ ಕೆಲಸದಿಂದ ವಜಾ ಮಾಡಿರುವ ಸಿಬ್ಬಂದಿಯ ಯಾದಿ

ಕ್ರ.ಸಂಖ್ಯೆ	ಕಾರ್ಮಿಕನ ಹೆಸರು	ಹುದ್ದೆ	ನಿಲಂಬಿತ/ವಜಾ ಮಾಡಿರುವ ಕಾರ್ಮಿಕನ ಮೇಲಿರುವ ಆರೋಪಗಳು
೧	೨	೩	೪
ಸರ್ವಶ್ರೀ			
೧	ಎಂ.ಐ. ಭಿಸ್ತೆ	ಫಿಟರ್ ಹೆಲ್ಪರ್	ಕಾರ್ಖಾನೆ ಮಾಲ್ಕಿಯ ಗನ್‌ಮೆಟಲ್‌ನ್ನು ಕಳವು ಮಾಡಿದ್ದರ ಹಾಗೂ ಕೆಲಸದಿಂದ ಅನಧಿಕೃತ ಗೈರುಉಳಿದಿದ್ದರ ದುರ್ವರ್ತನೆಯ ಬಗ್ಗೆ ವಜಾ ಮಾಡಲಾಗಿದೆ.
೨	ಟಿ.ಕೆ. ಪಾಟೀಲ	ಮಾಳಿ	ಕೆಲಸದಿಂದ ಅನಧಿಕೃತ ಗೈರ ಉಳಿದಿದ್ದರ ಹಾಗೂ ಕೆಲಸದಲ್ಲಿಯ ಅದಕ್ಷತೆಯ ಬಗ್ಗೆ ವಜಾ ಮಾಡಲಾಗಿದೆ.
೩	ಹೆಚ್.ಎಂ. ಪಿಂಜಾರಿ	ಪ್ಯಾನಕೂಲಿ	ಕಾರ್ಖಾನೆ ಮಾಲ್ಕಿಯ ಸಕ್ಕರೆಯನ್ನು ಕಳವು ಮಾಡಿದ್ದರ ಆಪಾದನೆಯ ಬಗ್ಗೆ ಕೆಲಸದಿಂದ ವಜಾ ಮಾಡಲಾಗಿದೆ.
೪	ವೈ.ಹೆಚ್.ಇನಾಮದಾರ	ಟರ್ನರ್	ಕಾರ್ಖಾನೆ ಮಾಲ್ಕಿಯ ಗನ್‌ಮೆಂಟಲ್ ಕಳವು ಮಾಡಿದ್ದರ ಆಪಾದನೆಯ ಬಗ್ಗೆ ಮಾಡಲಾಗಿದೆ.
೫	ಜಿ.ಪಿ. ಪೆನೆಟಿ	ನವಗಣಿ	ಕಾರ್ಖಾನೆ ಮಾಲ್ಕಿಯ ಹೊಸ ಅರಿವೆಯನ್ನು ಕಳವು ಮಾಡಿದ್ದರ ಆಪಾದನೆಯ ಬಗ್ಗೆ ವಜಾ ಮಾಡಲಾಗಿದೆ.
೬	ಬಿ.ಎಸ್. ಪಾಟೀಲ (ಕಾಳಾಯಿ)	ಸ್ಲಿಪ್ ಬಾಯ್	ಬೇರೆ ಜನರ ಕಬ್ಬನ್ನು ಕಾರ್ಖಾನೆಯ ಒಬ್ಬ ಸದಸ್ಯರ ಹೆಸರಿನಲ್ಲಿ ಕಾರ್ಖಾನೆಗೆ ಪೂರೈಸಿದ್ದರ ದುರ್ವರ್ತನೆಯ ಬಗ್ಗೆ ವಜಾ ಮಾಡಲಾಗಿದೆ.
೭	ಎಸ್.ಜಿ. ಮಾನೆ	ಸೆಂಟ್ರಿಫ್ಯೂಗಲ್ ಆಪರೇಟರ್	ಕಾರ್ಖಾನೆ ಮಾಲ್ಕಯ ಗನ್‌ಮೆಂಟಲ್ ಕಳವು ಮಾಡಿದ್ದರ ಆಪಾದನೆಯ ಬಗ್ಗೆ ವಜಾ ಮಾಡಲಾಗಿದೆ.
೮	ಎಂ.ಎಂ. ಧಪ್ಪಿ	ಡ್ರೈವರ್	ಕೆಲಸದಲ್ಲಿಯ ಅದಕ್ಷತೆಯ ಹಾಗೂ ಕಾರ್ಖಾನೆಯ ವಾಹನದಲ್ಲಿ ಅನಧಿಕೃತವಾಗಿ ಪ್ರವಾಸಿಗರನ್ನು ಸಾಗಿಸಿದ್ದರ ದುರ್ವರ್ತನೆಯ ಬಗ್ಗೆ ವಜಾ ಮಾಡಲಾಗಿದೆ.
೯	ಡಿ.ವಿ. ಹಿರೇಮಠ	ಫಿಟರ್-೩	ಕಾರ್ಖಾನೆ ಮಾಲ್ಕಿಯ ಗನ್‌ಮೆಟಲ್‌ನ್ನು ಕಳವು ಮಾಡಿದ್ದ ಆಪಾದನೆಯ ಬಗ್ಗೆ ವಜಾ ಮಾಡಲಾಗಿದೆ.
೧೦	ಎ.ಎಸ್. ಪಾಟೀಲ	ಕೇನ್‌ಯಾರ್ಡ್ ಸೂಪರ್‌ವೈಸರ್	ಕಾರ್ಖಾನೆಯ ಸದರ್ಯನೊಡನೆ ಸರಿಯಾಗಿ ವರ್ತಿಸದೇ ಬಿರುನುಡಿ ಹಾಗೂ ಅವಾಚ್ಯ ಶಬ್ದ ಮುಂತಾದವುಗಳಿಂದ ಮಾತನಾಡಿದ್ದರ ದುರ್ವರ್ತನೆಯ ಬಗ್ಗೆ ವಜಾ ಮಾಡಲಾಗಿದೆ.

೧	೨	೩	೩
೧೧	ಎಸ್.ಟಿ. ಹುಲ್ಮಾಳ	ಫಿಟರ್	ಕಾರ್ಖಾನೆಯಂ ಮೊಲಾಸಿಸ್ ಟ್ಯಾಂಕದಿಂದ ಮೊಲಾಯಿಸಿಸ್ ತುಂಬಿ ತುಳುಕಿ ಗಟಾರಕ್ಕೆ ಹರಿಯಲು ಬಿಟ್ಟ ಕೆಲಸದಲ್ಲಿಯು ನಿರ್ಲಕ್ಷತನದ ಆಪಾದನೆಯ ಬಗ್ಗೆ ವಜಾ ಮಾಡಲಾಗಿದೆ.
೧೨	ಎ.ಎಂ. ಪಾಟೀಲ	ಗಂಮಾಸ್ತ	ಚೆಕ್‌ಬುಕ್‌ನ್ನು ಕಳವು ಮಾಡಿದ್ದರ ಹಾಗೂ ಖೊಟ್ಟಿ ಸಹಿ ಮಾಡಿ ಕಾರ್ಖಾನೆಯ ರೂ. ೧೯,೮೦೦–೦೦ ಗಳ ಧನಾಪಹರಣ ಮಾಡಿದ್ದರ ದುರ್ವರ್ತನೆಯ ಬಗ್ಗೆ ವಜಾ ಮಾಡಲಾಗಿದೆ.
೧೩	ಜಿ.ಟಿ. ಉಳ್ಳಾಗಡ್ಡಿ		ನಮ್ಮ ಕಾರ್ಖಾನೆಯಂ ಆಡಳಿತ ಮಂಡಳಿಯ ವೈಸ್–ಛೇರ್ಮನ್‌ರನ್ನು ಅವಾಚ್ಯ ಹಾಗೂ ಅವಮಾನಕರವಾದ ಶಬ್ದಗಳಿಂದ ಬೈದು ನಿಂದಿಸಿದ್ದರ ದುರ್ವರ್ತನೆಯ ಬಗ್ಗೆ ವಜಾ ಮಾಡಲಾಗಿದೆ.
೧೪	ಎ.ಎ. ನರಸಣ್ಣನವರ	ಸ್ಟೀಲ್ ಆಪರೇಟರ್	ಕೆಲಸದ ಸಮಯದಲ್ಲಿ ಮಟಕಾ ನಂಬರಗಳುಳ್ಳ ಪತ್ರಿಕೆಯಂನ್ನು ಹಾಗೂ ಕೆಲವೊಂದು ಬೇರಿಜ ವಜಾಬಾಕಿ ಮಾಡಿದ ಕಾಗದಗಳನ್ನು ಕೈಯಲ್ಲಿ ಹಿಡಿದುಕೊಂಡು ಮಟಕಾ ನಂಬರಗಳನ್ನು ತೆಗೆಯುವುದರಲ್ಲಿ ಮಗ್ನರಾಗಿದ್ದರಿಂ ಆಪಾದನೆಯ ಬಗ್ಗೆ ಅವರನ್ನು ಕೆಲಸದಿಂದ ನಿಲಂಬಿತಗೊಳಿಸಲಾಗಿತ್ತು.
೧೫	ಎಸ್.ಎಂ.ಚೊಂಚನವರ	ವೇಬ್ರಿಡ್ಜ್ ಅಟೆಂಡೆಂಟ್	
೧೬	ವಿ.ಎಸ್. ಮಠಪತಿ	ಫಿಟರ್ ಹೆಲ್ಪರ್	
೧೭	ಎ.ಎನ್. ಹಂದ್ಯಾರ	ಸ್ಟೀಲ್ ಆಪರೇಟರ್	
೧೮	ಕೆ.ಎಸ್. ಮಾಳಿ	ವೇಬ್ರಿಡ್ಜ್ ಅಟೆಂಡೆಂಟ್	
೧೯	ಎಸ್.ಎಲ್. ಗಡಕರಿ	ಪಂಪ್ ಅಟೆಂಡೆಂಟ್	
೨೦	ಎಸ್.ಎ. ಕಾಪಸ್	ಮಶಿನಿಷ್ಟ	ನಮ್ಮ ಕಾರ್ಖಾನೆಯ ಕಾಲನಿಯಲ್ಲಿ ವಾಸಿಸುವ ಕಾರ್ಮಿಕನ ಎದೆಯಂ ಮೇಲಿನ ಅಂಗಿ ಹಿಡಿದು ಅವನ ಕೈಯಲ್ಲಿದ್ದ ಸೈಕಲನ್ನು ಕಸಿದು ಅವನನ್ನು ನೂಕಿ ಹೊಡೆದು ಅವನ ಹೆಂಡತಿ,
೨೧	ಆರ್.ಕೆ. ನಿಲಜಿ	ವಾಯರ್‌ಮೆನ್	ತಾಯಿ ಹಾಗೂ ಅವನ ಅಕ್ಕ ತಂಗಿಯರ ಬಗ್ಗೆ ಅವಾಚ್ಯ ಶಬ್ದಗಳಿಂದ ಬೈದಿದ್ದರ ಗಂಭೀರ ಸ್ವರೂಪದ ಆತಿಸ್ಸಿನ ದುರ್ವರ್ತನೆಗಾಗಿ ವಜಾ ಮಾಡಲಾಗಿದೆ.
೨೨	ಎ.ಬಿ. ಪಾಟೀಲ್	ವಾಚ್‌ಮೆನ್	ಕೆಲಸದಿಂದ ಅನಧಿಕೃತ ಗೈರ ಆಗಿದ್ದರ ದುರ್ವರ್ತನೆಯ ಬಗ್ಗೆ ವಿಚಾರಣೆಯನ್ನು ಕಾದು ನಿಲಂಬಿತಗೊಳಿಸಲಾಗಿದೆ.
೨೩	ಎಂ.ಬಿ. ಹಾಲಗಡಗಿ	ಫಿಟರ್	ಕಾರ್ಖಾನೆ ಮಾಲ್ಕಿಯ ಸಂಮಾರು ೨ ಕಪ್ಪು ಗಳಾಗುವಷ್ಟು ರೆಕ್ಟಿಫೈಡ್ ಸ್ಪಿರಿಟನ್ನು ಕಳವು ಮಾಡಿದ್ದರ ದುರ್ವರ್ತನೆಯ ಸಂಬಂಧದಲ್ಲಿ ನೇರವಾಗಿ ವಿಚಾರಣೆಯನ್ನು ನಡೆಸಿ ಸದರಿ ದುರ್ವರ್ತನೆಯ ವಿಚಾರಣೆಯಲ್ಲಿ ಸಿದ್ಧವಾಗಿದ್ದರಿಂದ ವಜಾ ಮಾಡಲಾಗಿದೆ.

ಶ್ರೀ ಎಂ. ಎಸ್. ಪಾಟೀಲ್.— ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಹಕಾರ ಮಂತ್ರಿಗಳು ಬಹಳ ವಿವರವಾದ ಉತ್ತರ ಕೊಟ್ಟಿದ್ದಾರೆ. ಈ ಒಂದು ಕಾರ್ಖಾನೆಯಲ್ಲಿ ಕೆಲಸ ಮಾಡತಕ್ಕಂಥ ನೌಕರದಾರರ ಕಾರ್ಖಾನೆಯ ಹಿತದೃಷ್ಟಿಯಿಂದ ಯಾವುದಾದರೂ ಅಕ್ರಮಯ ಮಾಡಿದ್ದರೆ, ತಪ್ಪು ಮಾಡಿದ್ದರೆ ಅವರನ್ನು ವಜಾ ಮಾಡಬಹುದು. ಇದರಲ್ಲಿ ಏನಾಗಿದೆ ಎಂದರೆ ಮೂರು ಜನ ಕಾರ್ಮಿಕರನ್ನು, ಕ್ಷುಲ್ಲಕ ಕಾರಣಗಳಿಗಾಗಿ, ಅಂದರೆ ಯಾರನ್ನೋ ಏನೋ ಬೈದರು ಅವಾಚ್ಯ ಶಬ್ದ ಉಚ್ಚರಿಸಿದರು ಎಂದು ವಜಾ ಮಾಡಿದ್ದಾರೆ. ಇದಕ್ಕೆ ಸಕ್ಕರೆ ನಿರ್ದೇಶಕರು ತಡೆಯಾಜ್ಞೆ ಕೊಟ್ಟಿದ್ದಾರೆ. ತಡೆಯಾಜ್ಞೆ ಬರುವುದಕ್ಕಿಂತ ಮುಂಚಿತವಾಗಿ ಆಡಳಿತ ಮಂಡಳಿಯವರು ಠರಾವು ಮಾಡಿ, ಹೊರಗೆ ಹಾಕಿದ್ದಾರೆ ಎಂದು ತಾವು ಹೇಳಿದಿರಿ, ಅದು ಸತ್ಯಕ್ಕೆ ದೂರವಾದ ಸಂಗತಿ. ತಡೆಯಾಜ್ಞೆ ಹೋದ ಮೇಲೆ, ತಡೆಯಾಜ್ಞೆ ಕೊಟ್ಟರೂ ಕೂಡಾ, ಅದನ್ನು ಸ್ವೀಕರಿಸದೇ ಅವತ್ತಿನಿಂದಲೇ ವಜಾ ಮಾಡಿದ್ದಾರೆ. ಮಾನ್ಯ ಮಂತ್ರಿಗಳಿಗೆ ನಾನು ಇದರ ಬಗ್ಗೆ ಪತ್ರ ಬರೆದೆ. ಇದು ಬಹಳ ಅನ್ಯಾಯ, ಬಹಳ ಪ್ರಾಮಾಣಿಕವಾಗಿ ೨೨ ವರ್ಷದಿಂದ ಕೆಲಸ ಮಾಡಿದ ಕಾರ್ಮಿಕವರ್ಗದವರನ್ನು ಕೆಲಸದಿಂದ ವಜಾ ಮಾಡಿರುವುದು ಸರಿಯಲ್ಲ ಇದರಿಂದ ಆ ಆಡಳಿತ ಮಂಡಳಿಯ ಮೇಲೆ ನಿಮ್ಮ ಹಿಡಿತ ತಪ್ಪಿಹೋಗಿದೆ ಎಂದು ಗೊತ್ತಾಗುತ್ತದೆ. ಅಲ್ಲಿ ಮಟಕಾ ಆಡುವಂತಹ ಕಾರ್ಮಿಕರು ಏನಿದ್ದಾರೆ, ಅವರನ್ನು ಹಿಡಿದು ಪೋಲೀಸರಿಗೆ ಕೊಡಬೇಕು, ಆದರೆ ಅವರನ್ನು ಅಲ್ಲಿ ಮುಂದುವರಿಸಿದ್ದಾರೆ ಪ್ರಾಮಾಣಿಕವಾಗಿ ಕೆಲಸ ಮಾಡಿದಂಥವರನ್ನು ವಜಾ ಮಾಡಿದ್ದಾರೆ. ಮಟಕಾ ಆಡತಕ್ಕಂಥ ಕಾರ್ಮಿಕ ವರ್ಗದವರ ಮೇಲೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ. ಮಟಕಾದ ಮೇಲೆ ಕಾರ್ಯಾಚರಣೆ ನಡೆಸುತ್ತಿದ್ದೇವೆ, ಮಟಕಾ ನಿಂತು ಹೋಗಿದೆ ಎಂದು ಹೇಳುತ್ತೀರಿ. ಆದರೆ ಇಲ್ಲಿ ಮಟಕಾ ಆಡುತ್ತಿರುವವರ ಮೇಲೆ ಪೋಲೀಸ್ ಕೇಸ್ ಹಾಕುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ. ಮಟಕಾ ಆಡತಕ್ಕ ಕಾರ್ಮಿಕ ವರ್ಗದವರನ್ನು ಆಡಳಿತ ಮಂಡಲಿಯವರೂ ಪ್ರೋತ್ಸಾಹಿಸುತ್ತಿದ್ದಾರೆ, ಅವರನ್ನು ಪೋಲೀಸರ ಕೈಗೆ ಕೊಡದೇ ಇರತಕ್ಕಂಥಾದ್ದು ಇದೆ. ಇದರ ಬಗ್ಗೆ ತಾವು ಏನು ಕ್ರಮ ಕೈಗೊಳ್ಳುತ್ತೀರಿ ಎಂಬುದನ್ನು ತಾವು ಹೇಳಬೇಕು,

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ, ಇದು ಒಂದು ಸ್ವಾಯತ್ತತೆ ಇರುವ ಸಂಸ್ಥೆ. ಸಣ್ಣ ಪುಟ್ಟ ಕಾರಣಗಳಿಗೆ ಸರಕಾರ ಮಧ್ಯ ಪ್ರವೇಶ ಮಾಡುವುದಿಲ್ಲ, ಎಲ್ಲೂ ಸಹ ಮಾಡುವುದಿಲ್ಲ. ಅಲ್ಲಿ ಅವರದ್ದೇ ಆದ ಚುನಾಯಿತ ಬೋರ್ಡ್ ಇದೆ. ಅಲ್ಲಿನ ಕಾರ್ಮಿಕರಿಗೆ ಅನ್ಯಾಯ ಆಗಿ, ಅವರು ಶುಗರ್ ಡೈರೆಕ್ಟರ್ ಮುಂದೆ ಅಥವಾ ಸಹಕಾರ ಇಲಾಖೆಯ ಅಧಿಕಾರಿಗಳ ಮುಂದೆ ಅಪೀಲ್ ಮಾಡಿದಾಗ ಮಾತ್ರ ಸರಕಾರ ಮಧ್ಯ ಪ್ರವೇಶ ಮಾಡುತ್ತದೆ. ಇನ್ನು ಉಳಿದದ್ದು ಅಲ್ಲಿನ ಆಡಳಿತ ಮಂಡಲಿ ಹಾಗೂ ಅದರ ಸದಸ್ಯರಿಗೆ ಸಂಬಂಧಪಟ್ಟದ್ದು. ಸ್ಟೇ ಆರ್ಡರನ್ನು ತೆಗೆದುಕೊಂಡು ಹೋಗಿ ಅವರ ಕೈಗೆ ಕೊಟ್ಟರೂ ಸಹ ಅವನ್ನು ನಿರ್ಲಕ್ಷಿಸಿ ವಜಾ ಮಾಡಿದ್ದಾರೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅದನ್ನು ಶುಗರ್ ಡೈರೆಕ್ಟರ್‌ರವರಿಗೆ ಹೇಳಿ ವಿಚಾರಣೆ ಮಾಡಿಸುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.— ಮಾನ್ಯ ಸಚಿವರು ಯೋಗ್ಯವಾದ ವಿಷಯಗಳನ್ನು ಹೇಳಿದ್ದಾರೆ. ಕೊನೆ ಸಲಹೆಯನ್ನು ಒಪ್ಪಿದ್ದೇನೆ ಎಂದು ಹೇಳಿದ್ದಾರೆ, ಅಲ್ಲಿ ಮಟಕಾ ಇದ್ದುದ್ದನ್ನು ಒಪ್ಪಿದ ಮೇಲೆ ಅದನ್ನು ತಡಗಟ್ಟುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ಮಟಕಾದಲ್ಲಿ ಸಿಕ್ಕಿಹಾಕಿಕೊಂಡಿರುವವರನ್ನು, ಕೆಲಸಕ್ಕೆ ನೇಮಿಸಿಕೊಂಡಲ್ಲಿ ಸರಕಾರ ಕೈಹಾಕುವುದಕ್ಕೆ ಬರುತ್ತದೆ, ಸರಕಾರ ಕೈಹಾಕಲಿಕ್ಕೆ ಏನು ತೊಂದರೆ ಇದೆಯೋ ಗೊತ್ತಿಲ್ಲ. ಅಂತಹವರನ್ನು ನೇಮಿಸಿಕೊಂಡಿರುವುದು ತಪ್ಪು ಎಂದು ಆದೇಶ ಕೊಡಬೇಕು. ಇನ್ನು ಸ್ಟೇ ಆರ್ಡರ್ ಕೊಟ್ಟ ಮೇಲೂ ಕೂಡಾ ಮೂರು ಜನರನ್ನು ಸಸ್ಪೆಂಡ್ ಮಾಡ ಲಾಗಿದೆ, ಸ್ಟೇ ಆರ್ಡರ್ ಕೊಟ್ಟ ಮೇಲೆ ರಿಕಲ್ಯೂಷನ್ ಮಾಡಲಾಗಿದೆ ಎಂದು ತಿಳಿದು ಬಂದಿದೆ. ಸ್ಟೇ ಆದ ಮೇಲೆ ಸಸ್ಪೆನ್‌ಷನ್ ಹೇಗೆ ಉಳಿಯುತ್ತದೆ. ಈಗಲೂ ಕೂಡಾ ಮಾನವೀಯ ದೃಷ್ಟಿಯಿಂದ ಆ ಮೂರು ಜನರನ್ನು ಕೆಲಸಕ್ಕೆ ತೆಗೆದುಕೊಳ್ಳುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ಮಟಕಾ ಆಡಲು ಹೋಗುವಂತಹ ಗುನ್ನೆಗಾರರು ಅಲ್ಲಿರಬಾರದು ಎಂದು ಹೇಳುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಆರ್. ಎಲ್. ಜಾಲಪ್ಪ.— ಮಟಕಾದವರು ಸಿಕ್ಕಿಹಾಕಿಕೊಂಡು, ಕೋರ್ಟ್‌ನಲ್ಲಿ ಜುಲ್ಮಾನೆ ಆಗಿದೆಯೋ ಏನೋ ನನಗೆ ಗೊತ್ತಿಲ್ಲ. ಅದರ ವಿವರವನ್ನು ತರಿಸಿಕೊಳ್ಳಬೇಕಾಗಿದೆ. ಸಸ್‌ಪೆನ್‌ಷನ್ ಮಾಡುವ ವಿಚಾರದಲ್ಲಿ ಸ್ಟೇ ಆರ್ಡರ್ ಕೊಟ್ಟಿದ್ದಾರೆ ಎಂದು ತಾವು ಹೇಳಿದ್ದೀರಿ. ಆದರೆ ಸ್ಟೇ ಆರ್ಡರ್ ಕರಾವುದರೊಳಗಾಗಿ ಅವರನ್ನು ರಿವೋಕ್ ಮಾಡಿದ್ದಾರೆಂದು ನನಗೆ ಬಂದಿರತಕ್ಕ ವರದಿಯಲ್ಲಿ ಇದೆ.

ಇದರ ಬಗ್ಗೆ ವಿಚಾರ ಮಾಡುತ್ತೇನೆ. ಆಲ್ಲಿರತಕ್ಕ ನೌಕರರು ಮಟಕಾ ಆಡಿ ಸಿಕ್ಕಹಾಕಿಕೊಂಡು, ಅವರಿಗೆ ಶಿಕ್ಷೆ ಆಗಿದ್ದರೆ ಹೇಳಬೇಕು. ಈ ವಿಚಾರ ಮ್ಯಾನೇಜ್‌ಮೆಂಟ್ ನೋಟೀಸಿಗೆ ಬಂದಿರುವುದು ನನಗೆ ಗೊತ್ತಿಲ್ಲ.

ಶ್ರೀ ಎಂ. ಎಸ್. ಪಾಟೀಲ್.— ಮಟಕಾ ಆಡುವವರ ಮೇಲೆ ಪೋಲೀಸ್ ಅಧಿಕಾರಿಗಳು ನೋಟೀಸ್ ಕೊಟ್ಟಿದ್ದಾರೆ. ಪೋಲೀಸ್ ಅಧಿಕಾರಿಗಳು ನೋಟೀಸ್ ಕೊಟ್ಟಿರುವವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದಾರೆ ಮ್ಯಾನೇಜ್‌ಮೆಂಟ್‌ನಲ್ಲಿರತಕ್ಕಂಥ ಅಧಿಕಾರಿಗಳು ತಮ್ಮ ಹತೋಟಿಯಲ್ಲಿರತಕ್ಕಂಥವರು. ಇವರ ಬಗ್ಗೆ ಯಾವ ಕ್ರಮವನ್ನು ತೆಗೆದುಕೊಂಡಿದ್ದೀರಿ. ಮಾನ್ಯ ಪಂಚಾಯ್ಕಿಮಂತ್ರಿಗಳನ್ನು ನಾನು ಕೇಳುತ್ತೇನೆ, ಸಕ್ಕರೆ ಕಾರ್ಖಾನೆಯಲ್ಲಿರತಕ್ಕಂಥ ಆಡಳಿತ ಮಂಡಲಿಯವರು ಈ ಮಟಕಾ ಆಡುವ ನೌಕರರ ಬಗ್ಗೆ ಯಾವ ಕ್ರಮ ತೆಗೆದುಕೊಂಡಿದ್ದಾರೆ. ಆಲ್ಲಿನ ಅಧಿಕಾರಿಗಳು ಯಾವುದೇ ಶಾಸಕರ ಮಾತು ಕೇಳುತ್ತಾ ಇಲ್ಲ, ನೀವು ಕೊಟ್ಟಂಥ ವರದಿ ಸತ್ಯಕ್ಕೆ ದೂರವಾದ ವರದಿ, ನೇರವಾದ ಕ್ರಮ ತೆಗೆದುಕೊಳ್ಳುವುದಕ್ಕೆ ಏನು ಪ್ರಯತ್ನ ಮಾಡುತ್ತೀರಿ. ಮಾನ್ಯ ಸಹಕಾರ ಮಂತ್ರಿಗಳ ಬಗ್ಗೆ ನನಗೆ ಪೂರಾ ನಂಬಿಕೆ ಇದೆ, ಸಂಪೂರ್ಣವಾದ ತನಿಖೆ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ? ಇಲ್ಲದೇ ಹೋದರೆ ನಾನು ರಾಜಿನಾಮೆ ಕೊಡುತ್ತೇನೆ, ನೀವೂ ರಾಜಿನಾಮೆ ಕೊಡಿ.

ಶ್ರೀ ಆರ್. ಎಲ್. ಜಾಲಪ್ಪ.— ಯಾರೂ ರಾಜಿನಾಮೆ ಕೊಡುವುದು ಬೇಡ, ಈಗಾಗಲೇ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇನೆ. ಮಾನ್ಯ ಸದಸ್ಯರು ಶಾಂತವಾಗಿರಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.— ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ, ಲಿಖಿತ ಉತ್ತರ ಇಲ್ಲ ಸದನದ ಹಿತದೃಷ್ಟಿಯಿಂದ ಲಿಖಿತ ಮೂಲಕ ಉತ್ತರ ಬೇಕು, ಇವುಗಳಿಗೆ ಪೂರಕ ಪ್ರಶ್ನೆಗಳನ್ನು ಕೇಳ ಬೇಕಾಗಿಲ್ಲ. ಇದು ಸದನದ ಎಲ್ಲಾ ಸದಸ್ಯರಿಗೂ ತಿಳಿಯಬೇಕು, ಲಿಖಿತ ಮೂಲಕ ಉತ್ತರ ಏನು ಕೊಡುತ್ತೀರಿ, ಅದನ್ನು ಪ್ರಿಂಟ್ ಮಾಡಿದರೆ ಎಲ್ಲರಿಗೂ ಗೊತ್ತಾಗುತ್ತದೆ, ಬೇಕಾದರೆ ನೀವು ಇದನ್ನು ಬಿ.ಎ.ಸಿ.ನಲ್ಲಿ ತೀರ್ಮಾನ ತೆಗೆದುಕೊಳ್ಳಿ.

ಅಧ್ಯಕ್ಷರು.— ಎಲ್ಲಾ ಕೊಟ್ಟೇ ಕೊಟ್ಟಿರುತ್ತಾರೆ.

ಶ್ರೀ ಬಿ. ಆರ್. ನೀಲಕಂಠಪ್ಪ,— ನಾನು ಮೂರು ದಿವಸ ಕೊಟ್ಟಿದ್ದೇನೆ, ಮೂರು ದಿವಸಗಳಲ್ಲೂ ಉತ್ತರ ಬಂದಿಲ್ಲ, ಇದನ್ನು ತಾವು ಕೊಡಿಸುತ್ತೀರೋ ಇಲ್ಲವೋ.

ಅಧ್ಯಕ್ಷರು,— ತರಿಸಿ ಕೊಡುತ್ತೇನೆ,

ಅಧ್ಯಕ್ಷರು— ಪ್ರಶ್ನೋತ್ತರ ವೇಳೆ ಮುಂಗಿಯಿತು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳ ಪಟ್ಟಿ

ಕನಕಪುರ ತಾಲ್ಲೂಕಿನ ಯಾದಮಾರನ ಹಳ್ಳಿ ಸಹಕಾರ ಸಂಘ

೧೬೩. ಶ್ರೀ ಕೆ. ಎಚ್. ಶಿವಲಿಂಗೇ ಗೌಡ (ಸಾತನೂರು).—ಮಾನ್ಯ ಸಹಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ಕನಕಪುರ ತಾಲ್ಲೂಕು, ಉಯ್ಯಂಬಳ್ಳಿ ಹೋಬಳಿ, ಯಾದಮಾರನಹಳ್ಳಿ ಸೇವಾ ಸಹಕಾರ ಸಂಘ ದೊಡ್ಡಾಲಹಳ್ಳಿ ರೇಷ್ಮೆ ಬೆಳೆಗಾರರ ಸಹಕಾರ ಸಂಘದೊಂದಿಗೆ ವಿಲೀನವಾದದ್ದು ಸಹಕಾರದವರ ಗಮನಕ್ಕೆ ಬಂದಿದೆಯೆ,

(ಆ) ಸದರಿ ಯಾದಮಾರನಹಳ್ಳಿ ಸೇವಾ ಸಹಕಾರ ಸಂಘದ ಕಾರ್ಯದರ್ಶಿಯಂಪರಿಂದ ಲೆಕ್ಕಪತ್ರ ಮತ್ತು ಸಂಬಂಧಪಟ್ಟ ದಾಖಲೆಗಳನ್ನು ದೊಡ್ಡಾಲಹಳ್ಳಿ ರೇಷ್ಮೆ ಬೆಳೆಗಾರರ ಸಹಕಾರ ಸಂಘಕ್ಕೆ ಕೊಟ್ಟಿರುತ್ತಾರೆಯೇ?

(ಇ) ಹಾಗಿಲ್ಲದಿದ್ದಲ್ಲಿ ಅವರ ವಿರುದ್ಧ ಕೈಗೊಂಡ ಕ್ರಮವೇನು ?